

# ರಿಟರ್ನ್ ಗಿಫ್ಟ್!

■ ಶ್ರೀಧರ ರಾಯಸಂ

ವಿಷ್ಣುಕುಮಾರ್

ಅನಿಲ್ ಕಂಪನಿಯೊಂದರ ಮ್ಯಾನೇಜರ್ ಆಗಿ ಐವತ್ತರ ಅಂಚಿನಲ್ಲಿದ್ದ. ಕೆಲಸದ ಜವಾಬ್ದಾರಿ, ಮಾನಸಿಕ ಒತ್ತಡ ಹೆಚ್ಚಾಗಿ ಕಾಲದ ಪರಿವೇ ಇಲ್ಲದೆ ಕಂಪನಿಗಾಗಿ ದುಡಿದು ಹಣ್ಣಾಗಿದ್ದ. ಆದರೂ ಅನಿಲ್‌ರ ಉತ್ಸಾಹ, ಮಹದಾಸೆಗಳು ಕುಂದಿರಲಿಲ್ಲ. ಬೆಳಿಗ್ಗೆ ಒಂಬತ್ತು ಗಂಟೆಗೆ ಕಂಪನಿಗೆ ಬಂದರೆ ಫೈಲ್‌ಗಳಲ್ಲಿ ತನ್ಮಯನಾಗಿ, ಪ್ರಾಡಕ್ಟ್ ಯಾವ ರೀತಿಯಾಗಿ ಮಾರಾಟ ಮಾಡಬೇಕು, ಪ್ರಚಾರ ಯಾವ ಬಗೆಯಲ್ಲಿರಬೇಕು, ಲಾಭ ಹೇಗೆ ಪಡೆಯಬೇಕು ಎಂಬುದರಲ್ಲಿ ಮಗ್ನನಾಗಿ ತನ್ನನ್ನೇ ತಾನು ಕಂಪನಿಗೆ ಅರ್ಪಿಸಿಕೊಂಡಿದ್ದ. ಮನೆಗೆ ವಾಪಸಾಗಲು ರಾತ್ರಿ ಒಂಬತ್ತು ಗಂಟೆ ಅಥವಾ ಹತ್ತು ಗಂಟೆಯಾದರೂ ಆಗುತ್ತಿತ್ತು.

ಅಂದು ಬೇಗ ಬಂದ ಅನಿಲ್ ಕಂಪನಿ ಫೈಲ್‌ಗಳಲ್ಲಿ ಗಮನಹರಿಸಿ ಹೊರಗಡೆಯಿದ್ದ ಕಂಪನಿ ಜವಾನನನ್ನು ಕರೆಗಂಟೆ ಮೂಲಕ ಒಳಕೆ ಕರೆಸಿಕೊಂಡು, ‘ಈ ದಿವಸ ಪೋಸ್ಟ್ ತಂದಿಯೇನು?’ ಎಂದು ಪ್ರಶ್ನಿಸಿದ.

‘ಇಲ್ರಿ ಸಾಹೇಬರ, ಕಳಿಸುವ ಪೋಸ್ಟ್ ಕಳಿಸಿಬಿಟ್ಟು ಈಗ ತರ್ತೀನ್ರಿ ಪೋಸ್ಟ್ ಲಗೂನ’ಎಂದ ಜವಾನ ರಾಮಪ್ಪ.

‘ಹೂಂ, ಬೇಗ ತೆಗೆದುಕೊಂಡು ಬಾ. ಬಹಳಷ್ಟು ಇಂಪಾರ್ಟೆಂಟ್ ಪತ್ರಗಳು ಬರಬೇಕಾಗಿವೆ.’

‘ಹಂಗೆ ಆಗಲ್ರಿ ಸಾಹೇಬರೆ. ನಾ ಹೊಂಟೆ’ ಎಂದು ಜವಾನ ರಾಮಪ್ಪ ಲಗುಬಗೆಯಿಂದ ಆಫೀಸ್‌ನ ಹೊರಗಡೆ ಹೊರಟ.

ಇಬ್ಬರು ಕ್ಲಾರ್ಕ್, ಒಬ್ಬ ಹೆಡ್ ಕ್ಲಾರ್ಕ್ ಜವಾನ, ಮೆನೇಜರ್‌ನೊಡಗೂಡಿ ಚಿಕ್ಕ ಬ್ರಾಂಚ್ ಆದರೂ ಲಾಭ ಗಳಿಕೆಯಲ್ಲಿ ಮೊಟ್ಟಮೊದಲ ಸ್ಥಾನದಲ್ಲಿತ್ತು. ಕಂಪನಿಯಲ್ಲಿ ಸಂಬಳದ ಜೊತೆಗೆ ಬೋನಸ್ ಇನ್ನಿತರ ಸವಲತ್ತುಗಳು ದೊರೆಯುತ್ತಿದ್ದುದರಿಂದ ಸಂತೃಪ್ತ ಭಾವನೆ ಎಲ್ಲರಲ್ಲೂ ಮೂಡಿತ್ತು.

ಸ್ವಲ್ಪ ಸಮಯ ಕಳೆಯುವುದರಲ್ಲಿ ಅವಸರದಿಂದ ಬಂದ ರಾಮಪ್ಪ ಪೋಸ್ಟ್ ಬ್ಯಾಗ್‌ನಲ್ಲಿದ್ದ ಪತ್ರಗಳು, ಲಕೋಟೆಗಳನ್ನು ಒಂದೊಂದಾಗಿ ಜೋಡಿಸಿ ಅನಿಲ್‌ಗೆ ಕೊಟ್ಟ. ಎಲ್ಲಾ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಅನಿಲ್ ಹೆಡ್ ಆಫೀಸ್‌ನಿಂದ ಬಂದ ಪತ್ರವನ್ನು ಕುತೂಹಲದಿಂದ ಪದೇ ಪದೇ ಓದಲು ಉತ್ಸುಕನಾದ. ಅನಿಲ್‌ನ ಈ ಉತ್ಸುಕತೆ ರಾಮಪ್ಪನಿಗೂ ಕುತೂಹಲದ ಸಂಗತಿಯಾಗಿತ್ತು. ಕುತೂಹಲ ತಡೆಯಲಾರದೆ,

‘ಏನ್ ಸಾಹೇಬರೆ, ಹೆಡ್ ಆಫೀಸ್ ಪತ್ರದಲ್ಲಿ ಏನು ಬರೆದಾರ್ರಿ, ನಮಗೇನಾದ್ರು ಇಂಕ್ರಿಮೆಂಟ್ ಅಥವಾ ಬೋನಸ್ ಕೊಡೋದು ತಿಳಿಸಿರಬಹುದು ನೋಡ್ರಿ’ ಎಂದ ರಾಮಪ್ಪ.

ಸಾವಕಾಶದಿಂದ ಪತ್ರ ಓದಿ ಮುಗಿಸಿದ ಅನಿಲ್, ‘ಇಂಕ್ರಿಮೆಂಟ್ ಬೋನಸ್ ವಿಷಯ ಅಲ್ಲೋ ಮಾರಾಯ, ನಮ್ಮ ಕಂಪನಿಗೆ ಹೊಸ ಕಂಪ್ಯೂಟರ್ ಆಪರೇಟರ್ ಪೋಸ್ಟ್ ಮಾಡ್ಯಾರೆ, ಅದೂ ಹುಡುಗಿ ಬರ್ತಾಳೆ. ತಿಳಿತೊ ಇಲ್ಲೊ’ ಎಂದು ಅವನ ಕುತೂಹಲಕ್ಕೆ ತನ್ನ ಉತ್ತರ ನೀಡಿದ.

‘ಹೌದಾ, ಛಲೋ ಆತು ಬಿಡ್ರಿ, ಲೇಡಿ ಬಂದ್ರೆ ನಮ್ಮ ಕಂಪನಿಗೆ ಒಂದು ಥರಾ ಕಳೆ ಬರ್ತೈತ್ರಿ, ಕಿಲಕಿಲ ಅಂಥ ನಗ್ತಾ ಆಕಿ ಕೆಲ್ಸ ಮಾಡ್ತಾ ಇದ್ರೆ, ಹೊಸ ಹುರುಪು ಎಲ್ಲರಿಗೂ ಬರ್ತದೆ ಹೌದಲ್ರಿ ಸಾಹೇಬರೆ’ ಎಂದ ರಾಮಪ್ಪ.

‘ಅದೇನೊ ಸರಿ, ನೀನು ಕೆಲಸ ನೋಡಿಕೊ ಹೋಗು’ ಎಂದು ಅನಿಲ್ ತನ್ನ ಗತ್ತನ್ನು ರಾಮಪ್ಪನ ಮೇಲೆ ಚಲಾಯಿಸಿದ.

ಅನಿಲ್ ಛೇಂಬರ್‌ನಿಂದ ಹೊರಗೆ ಬಂದ ರಾಮಪ್ಪ, ವಿಷಯ ಉಳಿದ ಸಿಬ್ಬಂದಿಗೆ ತಿಳಿಸಿದ. ಹೆಡ್ ಗುಮಾಸ್ತ ಆಶ್ಚರ್ಯ, ಸಂತಸದಿಂದ ಒಬ್ಬ ಲೇಡಿ ತಮ್ಮ ಕಂಪನಿಗೆ ಬಂದರೆ ಯಾರು ಬೇಡ ಅನ್ನುತ್ತಾರೆ. ಆಕೆ ಬಂದ ಕೂಡಲೇ ತಾನೇ ಅಪಾಯಿಂಟ್‌ಮೆಂಟ್ ಆರ್ಡರ್ ಪರಿಶೀಲಿಸಿ, ಎಲ್ಲಾ ಡಾಕ್ಯುಮೆಂಟ್‌ಗಳನ್ನು ಪಡೆದು ಕೆಲಸ ತಾನೇ ಹೇಳಿಕೊಡಬೇಕೆಂದು ಮನದಲ್ಲೇ ಚರ್ಚಿಸಿದ. ಆಕೆಗೆ ಒಂದು ಟೇಬಲ್, ಮೊದಲೇ ತರಿಸಿದ್ದ ಕಂಪ್ಯೂಟರ್, ಕುರ್ಚಿ ಹಾಕಿಸಿ ತನ್ನ ಪಕ್ಕದ ಸ್ಥಳದಲ್ಲಿ ಕುಳಿತು ಕೆಲಸ ಮಾಡಿಸಬೇಕೆಂದು ನಿರ್ಧರಿಸಿದ ಹೆಡ್ ಗುಮಾಸ್ತ. ಏನಾದರೂ ಆಗಲಿ ಬರುವ ಸುದ್ದಿ ನಿಜವೊ ಅಲ್ಲವೊ ಎಂಬ ಅನುಮಾನ ಪರಿಹರಿಸಿಕೊಳ್ಳಲು ಹೆಡ್ ಗುಮಾಸ್ತ ಅನಿಲ್‌ನ ಛೇಂಬರ್ ಪ್ರವೇಶಿಸಿ,

‘ಸಾರ್, ಲೇಡಿ ಬರ್ತಾಳಂತೆ. ಯಾವಾಗ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ತಾಳಂತೆ’ ಎಂದು ಒಂದೇ ಉಸುರಿನಲ್ಲಿ ಪ್ರಶ್ನಿಸಿದ.